ಪ್ರಬಂಧ

# ಮಾವಿನ ಸಖ್ಯದ ಆಖ್ಯಾನ; ಕಟು ಮಧುರ ವ್ಯಾಖ್ಯಾನ



**ನೆಲ್ಲುಕುಂಟೆ ವೆಂಕಟೇಶ್**
ಕಲೆ: ವಿಶ್ವನಾಥ್ ಎ.ಎಸ್.



ಮಾವು ಎಂಬ ಹೆಸರೆ ಅನೇಕರಿಗೆ ಇನ್ನಷ್ಟು ವರ್ಷ ಬದುಕಬೇಕೆಂಬ ಜೀವನ ಪ್ರೇಮ ಹುಟ್ಟಿಸುತ್ತದೆ. ಆದಿ ಕವಿ ಪಂಪ ಮಾವು ಮಲ್ಲಿಗೆಗಳು ಬದುಕಿನ ಸಾರ ಫಲಗಳೆನ್ನುತ್ತಾನೆ. ಸೃಷ್ಟಿಯ ನೈಜ ಚೆಲುವು, ಉತ್ಸಾಹ, ಪ್ರೇಮ, ಕಾಮ, ವಿರಹ, ವಿಷಾದಗಳ ಫಲವೆಂಬಂತೆ ಕಾಣಿಸುವ ಮಾವಿನ ಹಣ್ಣಿನ ಕುರಿತು ದೇಶದ ಅನೇಕ ಭಾಗಗಳ ಜನರಿಗೆ ತುಸು ಉತ್ಕಟ ಭಾವನೆಗಳಿವೆ. ಕರಾವಳಿಯಲ್ಲಿ ಮೊದಲು ಮಾಗುವ ಹಣ್ಣು ಗಂಗೆಯ ತಟಾಕದಲ್ಲಿ ಆಗಸ್ಟ್‌ವರೆಗೂ ಇರುತ್ತದೆ. ಪೂರ್ವ ಮುಂಗಾರಿನ ಮಳೆಗಳನ್ನು ಎದುರು ನೋಡುವ, ಸಂಭ್ರಮಿಸುವ ಈ ಹಣ್ಣು ಮುಂಗಾರು ಬೆನ್ನು ಹತ್ತಿದಂತೆಲ್ಲ ಓಡಿ ಓಡಿ ಜೂಟಾಟವಾಡಿ ತನ್ನ ಋತು ಸಂಭ್ರಮವನ್ನು ಕೊನೆಗಾಣಿಸಿಕೊಳ್ಳುತ್ತದೆ. ನಿರಂತರ ಮೋಡ ಕವಿದು ಸುರಿವ ಮಳೆಯೆಂದರೆ ಈ ಹಣ್ಣಿಗಾಗದು. ಇದಕ್ಕೆ ಧಗೆ ಬೇಕು. ಧಗೆಯೆದ್ದಷ್ಟು ಬಣ್ಣ ಚೆಲ್ಲುತ್ತದೆ. ಇದೊಂಥರಾ ಜೀವನೋತ್ಸಾಹ ಪುಟಿವ ತರುಣಿಯಂತೆ.

ಬೆಂಗಳೂರು ಪಕ್ಕದ ಬಯಲು ಸೀಮೆಯ ನನ್ನೂರು ಒಂದು ಕಾಲದಲ್ಲಿ ಮಾವಿನ ಸಿರಿ ಕಣಜದ ಊರು. ಡಿಸೆಂಬರ್, ಜನವರಿ ಬಂತೆಂದರೆ ಸಾಕು ಮನೆಯಿಂದ ಹೆಜ್ಜೆ ಹೊರಗಿಟ್ಟರೆ ಕನಿಷ್ಠ ಮೂರು ಕಿಲೋಮೀಟರು ಮಾವಿನ ತೋಪುಗಳ ನಾಟ್ಯ, ಸಂಗೀತ, ಸೌರಭಗಳಲ್ಲಿ ಅದ್ದಿ ಹೋಗುತ್ತಿದ್ದೆವು. ಹಸಿರು, ಕಂದು ಬಣ್ಣದ ಗಿಡದಲ್ಲಿ ಕೆಂಪು, ಬಿಳಿ, ಕಂದು ಬಣ್ಣದ ಹೂಗಳು, ಗಿಡ ಗೋಮವಾಗಿ ಬೆಳೆದಷ್ಟೂ ಹೂವಿನ ಗೊಂಚಲು ದೊಡ್ಡದು. ಜೂನ್‌ನಿಂದ ಡಿಸೆಂಬರ್‌ವರೆಗೆ ತನ್ನ ಪಾಡಿಗೆ ತಾನಿರುವ ಈ ಮರ ಬಂಗಾಳ ಕೊಲ್ಲಿಯ ತಣ್ಣನೆಯ ತುಸು ಹಿಮ ಬೆರೆತ ಗಾಳಿ ಬೀಸತೊಡಗಿದರೆ ಸಾಕು, ಮದುವೆ-ಜಾತ್ರೆಗೆ ಹೊರಟ ಹುಡುಗಿಯರಂತೆ ಬೀಗತೊಡಗುತ್ತದೆ. ರಾಗಿ, ಅವರೆ ಮುಂತಾದ ತೆನೆ, ಹೂಗಳ ಮಕರಂದಕ್ಕೆ ಬಂದ ಜೇನುಗಳು ಡಿಸೆಂಬರಿನ